# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 238 | Pages. 2 | Date: 02-08-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 238 - ಪುಟಗಳು : 2 02-08-2025 ಶನಿವಾರ Ph: 8762954248 ದರ : ₹1


# ಪ್ರಜ್ವಲ್ ದೋಷಿ: ಕೋರ್ಟ್

## ನ್ಯಾ.ಸಂತೋಷ್ ಗಜಾನನ ಭಟ್ ತೀರ್ಪು: ಶಿಕ್ಷೆ ಪ್ರಮಾಣ ನಾಳೆ ಪ್ರಕಟ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೆಂಗಳೂರು: ಮೈಸೂರು ಜಿಲ್ಲೆ ಕೆ.ಆರ್ ನಗರದ ಮಹಿಳೆಯ ಅಪಹರಣ ಮತ್ತು ಅತ್ಯಾಚಾರ ಪ್ರಕರಣದಲ್ಲಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ಎಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿರುದ್ಧ ತೀರ್ಪು ಪ್ರಕಟಿಸಿದೆ. ವಿಶೇಷ ನ್ಯಾಯಾಲಯದ ಜಡ್ಜ್ ಸಂತೋಷ್ ಗಜಾನನ ಭಟ್, ಜುಲೈ 29 ರಂದು ವಿಚಾರಣೆ ಪೂರ್ಣಗೊಳಿಸಿ ತೀರ್ಪನ್ನು ಕಾಯ್ದಿರಿಸಿದ್ದರು. ಇದೀಗ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ದೋಷಿ ಎಂದು ತೀರ್ಪು ನೀಡಿದ್ದಾರೆ.

ಪ್ರಜ್ವಲ್ ರೇವಣ್ಣಗೆ ಶಿಕ್ಷೆ ಏನು, ಎಷ್ಟು ವರ್ಷ ಎಂಬುದನ್ನು ನ್ಯಾಯಾಲಯ ಇನ್ನಷ್ಟೇ ಪ್ರಕಟಿಸಬೇಕಿದ್ದು, ಅದು ಶನಿವಾರ ನಿರ್ಧಾರ ಆಗಲಿದೆ. ಕಾನೂನು ತಜ್ಞರ ಪ್ರಕಾರ ಕನಿಷ್ಠ 10 ವರ್ಷ, ಗರಿಷ್ಠ ಜೀವಾವಧಿ ಶಿಕ್ಷೆಗೆ ಒಳಪಡುವ ಸಾಧ್ಯತೆ ಇದೆ. ಜಡ್ಜ್ ಸಂತೋಷ್ ಗಜಾನನ ಭಟ್ ತೀರ್ಪು ಪ್ರಕಟಿಸುತ್ತಿದ್ದಂತೆಯೇ



ಪ್ರಜ್ವಲ್ ರೇವಣ್ಣ ಕಣ್ಣೀರಿಟ್ಟರು. ಕಣ್ಣೀರು ಒರೆಸುತ್ತಲೇ ಕೋರ್ಟ್ ಹಾಲ್‌ನಿಂದ ಪ್ರಜ್ವಲ್, ಕಣ್ಣೀರೊರೆಸುತ್ತಾ ನಿರ್ಗಮಿಸಿದರು.

### ಜು.30 ರಂದು ಪ್ರಕಟವಾಗಬೇಕಿತ್ತು

ಕೆ.ಆರ್.ನಗರದ ಮಹಿಳೆಯೊಬ್ಬರ ಅಪಹರಣ ಮತ್ತು ಅತ್ಯಾಚಾರ ಪ್ರಕರಣದಲ್ಲಿ ಜು.30 ರಂದೇ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ಪ್ರಕಟಿಸಬೇಕಿತ್ತು. ಆದರೆ, ಕೆಲಮೊಂದು ಸ್ಪಷ್ಟೀಕರಣ ಬೇಕಿದ್ದರಿಂದ ತೀರ್ಪನ್ನು ಇಂದಿಗೆ ಕಾಯ್ದಿರಿಸಲಾಗಿತ್ತು.

### ಕೋರ್ಟ್ ಕೇಳಿದ ಸ್ಪಷ್ಟೀಕರಣ ಏನು

ಪ್ರಾಸಿಕ್ಯೂಷನ್ ಹಾಗೂ ಆರೋಪಿಗಳ ಪರ ವಕೀಲರು ಗೂಗಲ್ ಮ್ಯಾಪ್‌ನ್ನೂ ಕೂಡ ಸಾಕ್ಷ್ಯವನ್ನಾಗಿಸಿ ವಾದ ಮಂಡಿಸಿದ್ದಾರೆ.

ಗೂಗಲ್ ಕಂಪನಿಯ ದೃಢೀಕರಣವಿಲ್ಲದೇ ಸಲ್ಲಿಸಿರುವ ಮ್ಯಾಪ್‌ನ್ನು ಸಾಕ್ಷಿಯನ್ನಾಗಿ ಪರಿಗಣಿಸಬಹುದೇ ಎಂದು ನ್ಯಾಯಾಲಯ ಸ್ಪಷ್ಟನೆ ಕೇಳಿತ್ತು. ಇದಕ್ಕೆ ಉತ್ತರ ನೀಡಿದ್ದ ಎಸ್‌ಪಿ, ಅತ್ಯಾಚಾರ ನಡೆದ ಹೊಳೆನರಸೀಪುರ ಫಾರ್ಮ್ ಹೌಸ್‌ನ ಅಕ್ಷಾಂಶ ಹಾಗೂ ರೇಖಾಂಶವನ್ನು ಮಹಜರು ದಾಖಲೆಯಲ್ಲಿ ನಮೂದಿಸಿ ಸಲ್ಲಿಸಲಾಗಿದೆ. ಈ ಅಕ್ಷಾಂಶ ರೇಖಾಂಶಗಳನ್ನು ಕ್ಲಿಕ್ ಮಾಡಿದರೆ ಗೂಗಲ್ ಮ್ಯಾಪ್‌ನಲ್ಲಿ ಫಾರ್ಮ್ ಹೌಸ್ ಲೊಕೇಷನ್ ಹಾಗೂ 2021ರ ಫೋಟೋ ಸಿಗಲಿದೆ. ಹೀಗಾಗಿ ಇದನ್ನೂ ದಾಖಲೆಯ ಭಾಗವೆಂದು ಪರಿಗಣಿಸಬೇಕು ಎಂದು ಮನವಿ ಮಾಡಿದರು.

ವಶಕ್ಕೆ ಪಡೆಯಲಾದ ಸ್ಯಾಮ್ಸಂಗ್ ಜೆ 4 ಮೊಬೈಲ್ ಫೋನ್‌ನ್ನು ತನಿಖಾಧಿಕಾರಿ ಈ ಕೇಸಿನಲ್ಲಿ ಜಪ್ತಿ ಮಾಡಿರುವ ಬಗ್ಗೆ ಸ್ಪಷ್ಟೀಕರಣ ಬೇಕಿದೆ ಎಂದು ಕೋರ್ಟ್ ಕೇಳಿತ್ತು. ಇದಕ್ಕೆ ಪ್ರಜ್ವಲ್ ಪರ ವಕೀಲ ವಿಪಿನ್ ಕುಮಾರ್ ಜೈನ್ ಉತ್ತರಿಸಿ, ಬೇರೊಂದು ಕೇಸ್‌ನಲ್ಲಿ ವಶಕ್ಕೆ ಪಡೆದ ಮೊಬೈಲ್ ಅನ್ನು ತನಿಖಾಧಿಕಾರಿ ಈ ಕೇಸಿನಲ್ಲಿ ವಶಕ್ಕೆ ಪಡೆದಿಲ್ಲ.

ಎಫ್‌ಎಸ್‌ಎಲ್‌ನಿಂದ ಅವರು ಸ್ವೀಕರಿಸುವ ಬಗ್ಗೆಯಾಗಲೀ ದಾಖಲೆಯಿಲ್ಲ. ಹೀಗಾಗಿ ಮೊಬೈಲ್ ತನಿಖಾಧಿಕಾರಿ ಬಳಿಯಲ್ಲಿರಲೇ ಇಲ್ಲ. ಹೀಗಾಗಿ ಈ ಸಾಕ್ಷ್ಯಕ್ಕೆ ಬೆಲೆಯಿಲ್ಲ ಎಂದು ವಾದ ಮಂಡಿಸಿದ್ದರು.

### ಏನಿದು ಪ್ರಕರಣ

ಸರಣಿ ಅತ್ಯಾಚಾರ ಎಸಗಿರುವ ಆರೋಪ ಪ್ರಜ್ವಲ್ ಮೇಲೆ ಹಲವು ಪ್ರಕರಣಗಳಿದ್ದು, ಇದರಲ್ಲಿ ಕೆ.ಆರ್ ನಗರದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪವೂ ಒಂದಾಗಿದೆ. ಅತ್ಯಾಚಾರ ಪ್ರಕರಣ ಬೆಳಕಿಗೆ ಬರಬಾರದು ಎಂದು ಮಹಿಳೆಯನ್ನು ಅಪಹರಿಸಿ ಹುಣಸೂರು ಬಳಿಯ ತೋಟದ ಮನೆಯಲ್ಲಿ ಕೂಡಿಹಾಕಲಾಗಿತ್ತು ಎಂಬ ಆರೋಪದಡಿ ದೂರು ದಾಖಲಾಗಿತ್ತು. ಈ ಪ್ರಕರಣದಲ್ಲಿ ಮಾಜಿ ಸಚಿವ ಹೆಚ್.ಡಿ ರೇವಣ್ಣ ಮತ್ತು ಭವಾನಿ ರೇವಣ್ಣ ಸೇರಿದಂತೆ ಒಟ್ಟು 9 ಆರೋಪಿಗಳಿದ್ದಾರೆ. ಇದೇ ಮಹಿಳೆ ಅಪಹರಣ ಪ್ರಕರಣದಲ್ಲಿ ಹೆಚ್.ಡಿ ರೇವಣ್ಣ ಹಾಗೂ ಭವಾನಿ ರೇವಣ್ಣಗೆ ಈಗಾಗಲೇ ಜಾಮೀನು ದೊರೆತಿದೆ. ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ಒಂದು ವರ್ಷದಿಂದ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಪ್ರಕರಣ ಸಂಬಂಧ 2024 ರ ಮೇ 31ರಂದು ಪ್ರಜ್ವಲ್ ರೇವಣ್ಣ ಅವರನ್ನು ಪೊಲೀಸರು ಬಂಧಿಸಿದ್ದರು.

# ನ್ಯಾಯಾಂಗದ ಗಟ್ಟಿತನಕ್ಕೆ ಸಾಕ್ಷಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಹಿಳೆ ಅತ್ಯಾಚಾರ, ಅಪಹರಣ ಕೇಸ್‌ನಲ್ಲಿ ಪ್ರಜ್ವಲ್ ದೋಷಿ ಎಂದು ಕೋರ್ಟ್ ತೀರ್ಪು ನೀಡಿರುವುದು ನ್ಯಾಯಾಂಗ ವ್ಯವಸ್ಥೆ ಬಲಿಷ್ಠವಾಗಿದೆ ಎನ್ನುವುದಕ್ಕೆ ಸಾಕ್ಷಿ ಎಂದು ಬಿಜೆಪಿ ಮುಖಂಡ ಹಾಗೂ ವಕೀಲ ದೇವರಾಜೇಗೌಡ ಹೇಳಿದರು.

6 ತಿಂಗಳಿನಲ್ಲಿ ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಿದೆ, ಕಾಲ ವಿಳಂಬವಾದಾಗ ಅಪರಾಧಿಗಳು ತಪ್ಪಿಸಿಕೊಳ್ಳಲು ದಾರಿ ಸಿಗುತ್ತದೆ, ಪ್ರಜ್ವಲ್ ರೇವಣ್ಣ ಅವರ ವಕೀಲರು ಎಡವಿದ್ದು, ಸಮರ್ಥವಾಗಿ ವಾದ ಮಂಡಿಸುವಲ್ಲಿ ವಿಫಲರಾಗಿದ್ದಾರೆ



ಎಂದರು. ರಾಜಕೀಯ ಕುಟುಂಬ ಅಧಿಕಾರ, ಹಣದ ಬಲದ ಎದುರು ನ್ಯಾಯಾಂಗ ತೀರ್ಪು ಕೊಟ್ಟಿದೆ, ಕಾನೂನಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ರೇವಣ್ಣ ಕುಟುಂಬದವರು ಅಕ್ರಮದಲ್ಲಿ ಭಾಗಿಯಾಗಿದ್ದಾರೆ, ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ, ನಂಬಿಕೆ ಅನ್ನುವ ಪದಕ್ಕೆ ರೇವಣ್ಣ ಕುಟುಂಬದವರು ಅನರ್ಹರು ಎಂದು ನಾನು ಹೇಳುತ್ತಲೇ ಬಂದಿದ್ದೆ. ಆದರೆ ಹಣ, ಅಧಿಕಾರದ ಬಲ ನಡೆಯುವುದಿಲ್ಲ ಎಂಬುದು ಈ ತೀರ್ಪಿನಿಂದ ಗೊತ್ತಾಗಿದೆ ಎಂದು ನುಡಿದರು. ಇದರಿಂದ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಬಂದಿದೆ, ಕಾನೂನು ಮುಂದೆ ಯಾರೂ ದೊಡ್ಡವರಲ್ಲ, ತಲೆ ಬಾಗಲೇಬೇಕು, ವಕೀಲರ ಬಗ್ಗೆ, ನ್ಯಾಯಾಲಯದ ಬಗ್ಗೆ ಅನುಮಾನ ದೂರವಾಗಿದೆ. ನಿಜವಾದ ಸಂತ್ರಸ್ತೆಗೆ ನ್ಯಾಯ ಸಿಕ್ಕಿದೆ. ವಕೀಲರು ಸಾಕ್ಷಿಗಳನ್ನು ಕ್ರೂಡೀರಣ ಮಾಡುವಲ್ಲಿ ಎಡವಿದ್ದಾರೆ, ಪ್ರಜ್ವಲ್ ಕಣ್ಣೀರು ಹಾಕಿದ್ರು ಎಂದು ಭಾವುಕರಾಗಬಾರದು, ಅವರಿಂದ ಎಷ್ಟು ಹೆಣ್ಣು ಮಕ್ಕಳು ಜೀವನ ಹಾಳಾಗಿ, ಎಷ್ಟೋ ಕುಟುಂಬಗಳು ಹಾಳಾಗಿವೆ ಎಂದರು.

# ಆ.5 ರಂದು ಆರೋಗ್ಯ ತಪಾಸಣಾ ಶಿಬಿರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಹೊರ ವಲಯದ ಬಿ.ಕಾಟೀಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಉಚಿತವಾಗಿ ಹೃದಯ ಸಂಬಂಧಿ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಆ.5 ರಂದು ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಹಾಸನ್ ಸನ್‌ರೈಸ್‌ನ ಭರತ್ ಹೇಳಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಶ್ರೀ ಜೋಡಿ ಆಂಜನೇಯ ಸೇವಾ ಸಮಿತಿ, ರೋಟರಿ ಕ್ಲಬ್ ಆಫ್ ಹಾಸನ್ ಸನ್ ರೈಸ್, ಚನ್ನರಾಯಪಟ್ಟಣದ ಪುನರ್ಜೀವ ಸ್ವಯಂ ಸೇವಾ ಸಂಸ್ಥೆ, ಸ್ವಯಂ ಪ್ರೇರಿತ




ರಕ್ತ ಕೇಂದ್ರ, ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್, ಹಾಸನ ಲಯನ್ ಕ್ಲಬ್ ವತಿಯಿಂದ ಅಂದು ಬೆಳಗ್ಗೆ 9 ರಿಂದ 4 ಗಂಟೆವರೆಗೂ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಶಾಲಾ ಆವರಣದಲ್ಲಿ ನಡೆಯುವ ಶಿಬಿರದಲ್ಲಿ ಹೃದಯ ತಪಾಸಣೆ, ಕಣ್ಣಿನ ತಪಾಸಣೆ, ಬಿಪಿ, ಶುಗರ್ ಹಾಗೂ ಇತರೆ ಕಾಯಿಲೆಗಳಿಗೆ ವೈದ್ಯಕೀಯ ಸೇವೆ ದೊರೆಯುತ್ತದೆ, ಎಲ್ಲರೂ ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದರು. ಹೆಚ್ಚಿನ ಮಾಹಿತಿಗಾಗಿ 8884568273, 9845656669, 9482971599, 9035529636 ನಂಬರ್‌ಗಳನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ರೋಟರಿಯ ಯೋಗೇಶ್, ಮೋಹನ್ ಕುಮಾರ್, ದರ್ಶನ್ ಹಾಗೂ ಗಂಗಾಧರ್ ಇದ್ದರು.

# ಕೇಂದ್ರ-ರಾಜ್ಯ ಸರ್ಕಾರಗಳಿಂದ ರೈತರ ನಿರ್ಲಕ್ಷ್ಯ: ಯೋಗೇಶ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳುವುದು, ಬೆಳೆಗೆ ರಸಗೊಬ್ಬರ ಬಳಕೆ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಸೋಮವಾರದಿಂದ ಜಿಲ್ಲೆ ಹಾಗೂ ರಾಜ್ಯದಲ್ಲಿ ಆಮ್ ಆದ್ಮಿ ಪಕ್ಷದ ವತಿಯಿಂದ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಆಪ್ ಮುಖಂಡ ಅಗಿಲೆ ಯೋಗೇಶ್ ಹೇಳಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ನೇತೃತ್ವದ ತಂಡ ಎಲ್ಲ ಗ್ರಾಮಗಳಿಗೂ ಭೇಟಿ ನೀಡಿ ಅರಿವು ಮೂಡಿಸಲಿದೆ. ರಾಜ್ಯ ಸರ್ಕಾರ ಈ ವಿಚಾರದಲ್ಲಿ ಸಂಪೂರ್ಣ ವಿಫಲವಾಗಿದೆ. ರೈತರಿಗೆ ತಿಳುವಳಿಕೆ ಮೂಡಿಸಲು ಕೃಷಿ ಇಲಾಖೆ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಅಧಿಕಾರಿಗಳೇ ಇಲ್ಲ ಎಂದು ದೂರಿದರು.

ಜಿಲ್ಲೆಯಲ್ಲಿ 43 ರೈತ ಸಂಪರ್ಕ ಕೇಂದ್ರಗಳಿವೆ, ರೈತರಿಗೆ ಕೃಷಿಯ ಬಗ್ಗೆ ತಿಳುವಳಿಕೆ ಮೂಡಿಸುವುದು ಈ ಕೇಂದ್ರಗಳ ಕರ್ತವ್ಯ, ಒಂದು ಕಡೆ ಕೃಷಿ ಅಧಿಕಾರಿಗಳು ಇಲ್ಲ, ಮತ್ತೊಂದು ಕಡೆ ಸಹಾಯಕ ಅಧಿಕಾರಿಗಳೂ ಇಲ್ಲ. ಅನೇಕ ಹುದ್ದೆಗಳು ಖಾಲಿ




ಇವೆ ಎಂದು ಆರೋಪಿಸಿದರು. ಇದು ರೈತ ಪರವಾಗಿ ಇರುವ ಸರ್ಕಾರವೇ, ಕೃಷಿ ಮಂತ್ರಿ ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಕೂಡಲೇ ಸಹಾಯಕ ಕೃಷಿ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ರಾಜ್ಯದಲ್ಲಿ ರಸಗೊಬ್ಬರ ಸಮಸ್ಯೆ ತಲೆದೋರಿದೆ. ಕೇಂದ್ರ ಸರ್ಕಾರದವರು ನೀಡಿದ್ದೇವೆ ಎನ್ನುತ್ತಾರೆ, ರಾಜ್ಯದವರು ಕೊಟ್ಟಿಲ್ಲ ಎನ್ನುತ್ತಿದ್ದಾರೆ. ಒಟ್ಟಿನಲ್ಲಿ ಇವರಿಬ್ಬರಿಗೂ ರೈತರ ಬಗ್ಗೆ ಕಾಳಜಿ ಇಲ್ಲ ಎಂದು ಅಸಮಾಧಾನ ಹೊರ ಹಾಕಿದರು. ಒಟ್ಟಿನಲ್ಲಿ ರೈತರ ಹಿತ ಕಾಯುವಲ್ಲಿ ಉಭಯ ಸರ್ಕಾರಗಳು ಸಂಪೂರ್ಣ ನಿಷ್ಕ್ರಿಯವಾಗಿವೆ ಎಂದು ಆರೋಪಿಸಿದರು. ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ ಇಲ್ಲ, ಅಕಸ್ಮಾತ್ ಸಮಸ್ಯೆ ತಲೆ ತೋರಿದರೆ ಆಪ್ ಪಕ್ಷಕ್ಕೆ ಗಮನಕ್ಕೆ ತರಬೇಕು, ನಾವು ರೈತರೊಂದಿಗೆ ಇದ್ದೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಆಪ್ ಜಿಲ್ಲಾಧ್ಯಕ್ಷ ಆನಂದ್ ತೇಜೂರು, ಮುಖಂಡರಾದ ಮಂಜಣ್ಣ, ಸುಂದರೇಶ್ ಇದ್ದರು.

# ಒಳ ಮೀಸಲಾತಿ ಶೀಘ್ರ ಜಾರಿಗೆ ಒತ್ತಾಯ

## ನಗರದಲ್ಲಿ ಅರೆ ಬೆತ್ತಲೆ ಮೆರವಣಿಗೆ ಮುಂದೆ ಕರ್ನಾಟಕ ಬಂದ್‌ಗೆ ಕರೆ ಎಚ್ಚರಿಕೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆಧಾರದ ಮೇಲೆ ರಾಜ್ಯ ಸರ್ಕಾರ ತಕ್ಷಣವೇ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿ ಮಾಡುವಂತೆ ಆಗ್ರಹಿಸಿ ಕರ್ನಾಟಕ ದಸಂಸ, ಕರ್ನಾಟಕ ಮಾದಿಗ ದಂಡೋರ ಸಮಿತಿ, ಜಾಂಬವ ಯುವಸೇನೆ ಹಾಗೂ ಬಾಬು ಜಗಜೀವನ್‌ರಾಂ ಒಕ್ಕೂಟದವರು ನಗರದಲ್ಲಿಂದು ಅರೆಬೆತ್ತಲೆ ಮೆರವಣಿಗೆ ನಡೆಸಿದರು.

ಮಳೆಯ ನಡುವೆಯೂ ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ತಮಟೆ ಬಡಿತ, ಘೋಷಣೆಗಳೊಂದಿಗೆ ಮೆರವಣಿಗೆ ಹೊರಟ ಪ್ರತಿಭಟನಾಕಾರರು, ಎನ್.ಆರ್.ವೃತ್ತದ ಮೂಲಕ ಡಿಸಿ ಕಚೇರಿ ತಲುಪಿದರು. ಈ ವೇಳೆ ಶೀಘ್ರವೇ ನ್ಯಾ.ನಾಗಮೋಹನ್‌ದಾಸ್ ಆಯೋಗದ ವರದಿ ಆಧರಿಸಿ ಕೂಡಲೇ ಒಳ ಮೀಸಲಾತಿ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದಸಂಸ ಜಿಲ್ಲಾ ಸಂಚಾಲಕ ವಿರೂಪಾಕ್ಷಪುರ ಪ್ರಕಾಶ್, 2024 ಆ.1 ರಂದೇ ಸುಪ್ರೀಂಕೋರ್ಟ್ ಆದೇಶ ಮಾಡಿದ್ದರೂ, ಕರ್ನಾಟಕ ಸರ್ಕಾರ ತೀರ್ಪು ಜಾರಿ ಮಾಡಲು ಅನಗತ್ಯವಾಗಿ ವಿಳಂಬ ಮಾಡುತ್ತಿದೆ ಎಂದು ದೂರಿದರು. ಇದು ನಮ್ಮ ಸಮುದಾಯದಲ್ಲಿ ಆತಂಕ ಮತ್ತು ಅಸಮಾಧಾನಕ್ಕೆ ಕಾರಣವಾಗಿದೆ, ಇದರಿಂದಾಗಿ ಸಮುದಾಯದ ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು, ಕಾರ್ಮಿಕರು ಹಾಗೂ ಮಹಿಳೆಯರು ಹಾಗೂ ಒಟ್ಟಾರೆ ನಮ್ಮ ಸಮಾಜದವರು ನ್ಯಾಯಯುತ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಆತಂಕ ಹೊರ ಹಾಕಿದರು.

ಒಳ ಮೀಸಲಾತಿ ಜಾರಿಗೆ ವಿಳಂಬ ಮಾಡುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡನೀಯ. ಆದರೂ ಕೂಡ ದಲಿತ ಸಮುದಾಯದ ಸಚಿವರು ಹಾಗೂ ಶಾಸಕರು ಮೌನವಹಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು. ಆ.15 ರ ಸ್ವಾತಂತ್ರ್ಯ ದಿನಾಚರಣೆಯೊಳಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಒಳಮೀಸಲಾತಿ ಅನುಷ್ಠಾನಗೊಳಿಸಬೇಕು. ಅಥವಾ ಮುಂದಿನ ಅಧಿವೇಶನದಲ್ಲೇ ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇನ್ನಾದರೂ 35 ವರ್ಷಗಳ ನಮ್ಮ ಬೇಡಿಕೆಯಂತೆ ಒಳ ಮೀಸಲಾತಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು, ವಕೀಲರು, ಮಹಿಳೆಯರು ಸೇರಿ ಕರ್ನಾಟಕ ಬಂದ್‌ಗೆ ಕರೆ ನೀಡುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರು, ಜಿಪಂ ಮಾಜಿ ಸದಸ್ಯೆ ವತ್ಸಲಾ ಶೇಖರಪ್ಪ, ನಾಗವೇದಿ ಶೇಖರಪ್ಪ, ಕರ್ನಾಟಕ ಮಾದಿಗಂಡೋರ ಜಿಲ್ಲಾಧ್ಯಕ್ಷ ಎಂ.ಟಿ ವೆಂಕಟೇಶ್, ಹೊಳೆನರಸೀಪುರ ಮಂಜಣ್ಣ, ಲೋಕೇಶ್ ಆರ್. ಕ್ಯಾತನಹಳ್ಳಿ, ಮಹೇಶ್ ಬಾಣಾವರ, ಭಾಸ್ಕರ್ ಜಾಜೂರು, ಗೋವಿಂದ್ ರಾಜು ಹೊಸೂರು, ಸತೀಶ್ ಹೊಳೆನರಸೀಪುರ, ಸುನಿಲ್, ಶಿವಮೂರ್ತಿ ಗುತ್ತಿನಕೆರೆ, ಮಂಜುನಾಥ್ ಸಂಕೋನಹಳ್ಳಿ, ಸಿದ್ದೇಶ್, ಲಿಂಗರಾಜು, ಮೂಡಲಯ್ಯ ಮೊದಲಾದವರಿದ್ದರು.

# ಬೆಳೆ ಪೋಷಣೆಗೆ ನ್ಯಾನೋ ತಂತ್ರಜ್ಞಾನ ಬಳಸಿ: ತಹಶೀಲ್ದಾರ್ ಸಲಹೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಟಿಕೆಲವು ವರ್ಷಗಳಿಂದ ರೈತರು ಹೆಚ್ಚು ಇಳುವರಿ ಪಡೆಯಲು ಅಗತ್ಯಕ್ಕಿಂತ ಹೆಚ್ಚು ರಾಸಾಯನಿಕ ಗೊಬ್ಬರಗಳು ಹಾಗೂ ಕ್ರಿಮಿನಾಶಕ ಬಳಸಿ ಭೂಮಿಯನ್ನು ಬರಡಾಗಿಸಿದ್ದಾರೆ. ಇದರಿಂದಾಗಿ ಮುಂದೆ ಏನೂ ಬೆಳೆಯಲಾರದ ಸ್ಥಿತಿ ಬಂದರೂ ಬರಬಹುದುಟಿ ಎಂದು ತಹಶೀಲ್ದಾರ್ ವೈ.ಎಂ. ರೇಣುಕುಮಾರ್ ಆತಂಕ ವ್ಯಕ್ತಪಡಿಸಿದರು. ತಾಲ್ಲೂಕಿನ ಕಟ್ಟೆಬೆಳಗುಳಿಯ ಕುಮಾರ್ ಅವರ ಗದ್ದೆಗೆ ನ್ಯಾನೊ ತಂತ್ರಜ್ಞಾನದ ಡೋನ್ ಮೂಲಕ ಗೊಬ್ಬರ ಸಿಂಪಡಿಸುವ ವಿಧಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಟಿನ್ಯಾನೊ ತಂತ್ರಜ್ಞಾನದಲ್ಲಿ ಶೇ 50ರಷ್ಟು ಕಡಿಮೆ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರವನ್ನು ಬಳಸಬಹುದು, ಇದರಿಂದ ಭೂಮಿಯ ಫಲವತ್ತತೆ ಉಳಿಯುತ್ತದೆ. ಒಂದು ಎಕರೆಗೆ 10 ನಿಮಿಷದಲ್ಲಿ ಗೊಬ್ಬರ ಸಿಂಪಡಿಸಲಯ ಸಾಧ್ಯವಾಗುತ್ತದೆ, ಹಣ ಮತ್ತು ಸಮಯ ಉಳಿಯುತ್ತದೆಟಿ ಎಂದು ಸಲಹೆ ನೀಡಿದರು. ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಸವಿತಾ ಮಾತನಾಡಿ, ಟಿಬೇಸಾಯಕ್ಕೆ ಹರಳು ರೂಪದ ಯೂರಿಯಾವನ್ನು ಹೆಚ್ಚು ಬಳಸುವುದರಿಂದ ಮಣ್ಣಿನ ಫಲವತ್ತತೆ ಹಾಳಾಗಿ ಇಳುವರಿಯೂ ಕಡಿಮೆ ಆಗುತ್ತದೆ. ದ್ರವರೂಪದ ಯೂರಿಯಾವನ್ನು ನ್ಯಾನೊ ಯೂರಿಯಾ ಎನ್ನುತ್ತಾರೆ, ಇದು ಕಡಿಮೆ ಪ್ರಮಾಣದಲ್ಲಿ ಹೆಚ್ಚು ಪರಿಣಾಮಕಾರಿ, ಅಗತ್ಯ ಸಮಯದಲ್ಲಿ ಸೂಕ್ತ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸಬೇಕು ಎಂದರು.

# ಹಳೆಯ ವಿದ್ಯಾರ್ಥಿಗಳಿಂದ ಗುರುವಂದನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ನೀವು ಕಲಿಸಿದ ವಿದ್ಯೆಯೇ ನಮಗೆ ಬದುಕನ್ನು ರೂಪಿಸಿದೆ ಎಂದು ಗುರುವಿನ ಪಾದಸ್ಪರ್ಶಿಸಿ ವಂದಿಸಿದ ಶಿಷ್ಯರು, 25 ವರ್ಷಗಳ ನಂತರ ಗುರುವಂದನೆ ಸಲ್ಲಿಸುವ ಮೂಲಕ ಹೃದಯಸ್ಪರ್ಶಿ ಕಾರ್ಯಕ್ರಮವೊಂದಕ್ಕೆ ಸಾಕ್ಷಿಯಾದರು.

1999-2000ನೇ ಶೈಕ್ಷಣಿಕ ವರ್ಷದಲ್ಲಿ ರೋಟರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡಿಕೊಂಡಿದ್ದ 40ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಇತ್ತೀಚೆಗೆ ಶಾಲೆಯಲ್ಲಿ ಪುನರ್ ಮಿಲನ ಸಮಾರಂಭ ಹಾಗೂ ಗುರುವಂದನೆ ಕಾರ್ಯಕ್ರಮವನ್ನು ಅದ್ದೂರಿಯಾಗಿ ಹಮ್ಮಿಕೊಂಡಿದ್ದರು.

ಈ ಸಂದರ್ಭದಲ್ಲಿ ಶಾಲೆಯ ಅಧ್ಯಾಪಕರಾದ ಸದಾಶಿವ ಹೊಳ್ಳ, ಮನಮೋಹಕ ನಾಯಕ್, ಪ್ರೀತಾ ಹೊಳ್ಳ, ನೀರಧಾ, ಮಂಜುನಾಥ್, ಮುರಳೀಧರ್, ಎಂ.ಡಿ. ರುದ್ರೇಶ್, ಆಸ್ಮಾ, ಪ್ರಸನ್ನ ಕುಮಾರಿ, ಪರಮೇಶ್ ಹಾಗೂ ಪುಷ್ಪಾ ಪೊನಪ್ಪರನ್ನು ಆಹ್ವಾನಿಸಿ ಸನ್ಮಾನಿಸಲಾಯಿತು. ಅವರ ಪಾದಸ್ಪರ್ಶ ಮಾಡಿ ಗೌರವ ಸಲ್ಲಿಸುವ ಮೂಲಕ ವಿದ್ಯಾರ್ಥಿಗಳು ನಿಜಾರ್ಥದಲ್ಲಿ ಅಗುರುದಕ್ಷಿಣೆಟಿ ಸಲ್ಲಿಸಿದರು.




25 ವರ್ಷಗಳ ನಂತರ ಮತ್ತೆ ಈ ಶಾಲೆಗೆ ಬಂದು ನಮ್ಮ ಗುರುಗಳನ್ನು ನಮನ ಮಾಡುವ ಅವಕಾಶ ಸಿಕ್ಕಿರುವುದು ಅಸಾಧಾರಣ ಅನುಭವ. ಇದು ಮರೆಯಲಾಗದ ಕ್ಷಣ ಎಂದು ಹಳೆಯ ವಿದ್ಯಾರ್ಥಿ, ಸೆಸ್ಕ್ ಹಾಸನ ವಿಭಾಗದ ಕಾರ್ಯಪಾಲಕ ಅಭಿಯಂತರ ಅರ್ಜುನ್ ಗಾಣದಹೊಳೆ ಭಾವುಕರಾದರು.

ಪ್ರಸ್ತುತ ಶಾಲೆಯ ಮುಖ್ಯಶಿಕ್ಷಕರಾಗಿರುವ ಎಂ.ಡಿ. ರುದ್ರೇಶ್ ಅವರು ಮಾತನಾಡಿ, ವಿದ್ಯಾರ್ಥಿಗಳಿಂದ ಪಡೆದ ಗುರುಮಾನ್ಯತೆ ನಮ್ಮ ಶಿಕ್ಷಕ ವೃತ್ತಿಗೆ ಸಾರ್ಥಕತೆ ನೀಡುತ್ತದೆ.

ಇಂತಹ ಸಂಭ್ರಮದ ಕ್ಷಣಗಳು ನಮ್ಮ ಅಧ್ಯಾಪಕ ಜೀವನದ ಅಮೂಲ್ಯ ತೀರವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಸ್ಮರಣೀಯ ದಿನದಲ್ಲಿ ಹಳೆಯ ವಿದ್ಯಾರ್ಥಿಗಳಾದ ಶ್ರೀಕಾಂತ್, ಎಂ.ವಿ. ಸಂದೀಪ್, ಸುದರ್ಶನ್, ವಿಕಾಶ್ ಜೈನ್, ರಿತೇಶ್ ಜೈನ್, ಯು.ಆರ್. ಅರ್ಪಿತಾ, ಯು.ಆರ್. ಅಪೂರ್ವ, ಎಸ್.ಎಸ್. ರವಿ, ಪುನೀತ್, ಗೌರವ್, ಭಾವನಾ, ಪೂಜಾ ಸುಂದರ್‌ರಾಜ್, ನೈದಿಲೆ, ಶಿಲ್ಪಾ ಶೆಟ್ಟಿ ಮತ್ತು ಇತರರಿದ್ದರು

# ಬೃಹತ್ ತೆರವು ಕಾರ್ಯಾಚರಣೆ

## 82 ಎಕರೆ ಅರಣ್ಯ ಇಲಾಖೆ ವಶಕ್ಕೆ। ಭಾರಿ ಪೊಲೀಸ್ ಭದ್ರತೆ। ಡ್ರೋನ್ ಕಣ್ಗಾವಲು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಾಲೂಕಿನ ಸಾವಂತನಹಳ್ಳಿ ಗ್ರಾಮದ ಸರ್ವೆ ನಂಬರ್ 99 ರಲ್ಲಿ ಅರಣ್ಯ ಭೂಮಿಯ 82 ಎಕರೆ ಒತ್ತುವರಿಯನ್ನು ತೆರವುಗೊಳಿಸಲು ಅರಣ್ಯ ಇಲಾಖೆ ದೊಡ್ಡ ಮಟ್ಟದ ಕಾರ್ಯಾಚರಣೆ ನಡೆಸಿತು.

ಈ ಕಾರ್ಯಾಚರಣೆಯಲ್ಲಿ 100ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿ ಮತ್ತು 100ಕ್ಕೂ ಅಧಿಕ ಪೊಲೀಸರ ಬಂದೋಬಸ್ತ್‌ನೊಂದಿಗೆ ತೆರವು ಕಾರ್ಯ ನಡೆಸಿದರು.


ಸಾವಂತನಹಳ್ಳಿ ಗ್ರಾಮಸ್ಥರು ಒತ್ತುವರಿ ಮಾಡಿದ್ದ ಅರಣ್ಯ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯನ್ನು ಬೆಳೆದಿದ್ದರು. ಅರಣ್ಯ ಇಲಾಖೆಯ ಸಿಬ್ಬಂದಿ ಜೆಸಿಬಿ



ಬಳಸಿ ಮೆಕ್ಕೆಜೋಳವನ್ನು ತೆರವುಗೊಳಿಸಿ, ಅರಣ್ಯ ಭೂಮಿಯಲ್ಲಿ ಸಸಿಗಳನ್ನು ನೆಟ್ಟರು.

ಕೆಲವು ರೈತರು ತಾವು ಬೆಳೆದ ಮೆಕ್ಕೆಜೋಳ ಕಟಾವು ಮಾಡಿಕೊಂಡು ಹೋದರು. ಕಾರ್ಯಾಚರಣೆಯನ್ನು ಮುನ್ನಡೆಸಲು ಸಿಸಿಎಫ್ ಏಡುಕುಂಡಲ, ಡಿಸಿಎಫ್ ಸೌರಭ್‌ಕುಮಾರ್, ಎಸ್ಪಿ ಮಹಮದ್ ಸುಜೀತಾ, ಎಎಸ್‌ಪಿಗಳಾದ ವೆಂಕಟೇಶ್ ನಾಯ್ಡು, ತಮ್ಮಯ್ಯ, ಮತ್ತು ಆರ್‌ಎಫ್‌ಓ ಲಷ್ಕರ್‌ನಾಯಕ್ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು.

# ರಸಗೊಬ್ಬರ ದಾಸ್ತಾನು ಪರಿಶೀಲನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲೂಕಿನ ವಿವಿಧ ಕೃಷಿ ಸಹಕಾರ ಸಂಘಗಳ ರಸಗೊಬ್ಬರ ದಾಸ್ತಾನು ಗೋಡೌನ್‌ಗಳಿಗೆ ಗುರುವಾರ ಮಧ್ಯರಾತ್ರಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಕೋಕಿಲ ನೇತೃತ್ವದ ತಂಡ ಭೇಟಿ ನೀಡಿ ಸ್ಟಾಕ್ ಪರಿಶೀಲನೆ ನಡೆಸಿತು.

ಯೂರಿಯಾ ರಸಗೊಬ್ಬರ ಕೊರತೆ ಉಂಟಾಗಿರುವ ದೂರುಗಳ ಹಿನ್ನೆಲೆಯಲ್ಲಿ ಸರ್ಕಾರ, ಅಕ್ರಮ ದಾಸ್ತಾನು ಹಾಗೂ ಕಾಳಸಂತೆ ಮಾರಾಟ ತಡೆಗಟ್ಟಲು ರಸಗೊಬ್ಬರ ದಾಸ್ತಾನು ರಾತ್ರೋರಾತ್ರಿ ಪರಿಶೀಲಿಸಲು ಸೂಚನೆ ನೀಡಿತ್ತು.

ಅದರಂತೆ ಸಹಾಯಕ ಕೃಷಿ ನಿರ್ದೇಶಕಿ ಸ್ಥಳೀಯ ಪೊಲೀಸರೊಂದಿಗೆ ಬಾಳ್ಳುಪೇಟೆಯ ಜಮ್ಮನಹಳ್ಳಿ ಕೃಷಿ ಸಹಕಾರ ಪತ್ತಿನ ಸಹಕಾರ ಸಂಘದ ಗೋಡೌನ್ ಸೇರಿ ವಿವಿಧಡೆ ಭೇಟಿ ನೀಡಿ ಸ್ಟಾಕ್ ಪರಿಶೀಲಿಸಿದರು.

# ನ್ಯಾನೋ ರಸಗೊಬ್ಬರ ಡ್ರೋನ್ ಮೂಲಕ ಸಿಂಪರಣೆ: ರೈತರಿಗೆ ಜಾಗೃತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು : ಬೇಲೂರು ತಾಲ್ಲೂಕಿನ ಹೆಬ್ಬಾಳು ಗ್ರಾಮದಲ್ಲಿ ಕೃಷಿ ಇಲಾಖೆ ಮತ್ತು ಆತ್ಮ ಯೋಜನೆಯ ಸಹಯೋಗದೊಂದಿಗೆ ನ್ಯಾನೋ ಯೂರಿಯಾ ಮತ್ತು ಡಿಎಪಿ ರಸಗೊಬ್ಬರಗಳನ್ನು ಡ್ರೋನ್ ಮೂಲಕ ಸಿಂಪಡಿಸುವ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು. ರೈತರಾದ ರಾಜಶೇಖರ್, ಹಲಗಯ್ಯ ಮತ್ತು ಹಾಲಪ್ಪ ಅವರ ಮುಸುಕಿನ ಜೋಳದ ಹೊಲದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಪ್ರಸ್ತುತ, ರೈತರು ಯೂರಿಯಾ ರಸಗೊಬ್ಬರವನ್ನು ಅತಿಯಾಗಿ ಬಳಸುವುದರಿಂದ ಭೂಮಿಯ ಫಲವತ್ತತೆ ಕುಸಿಯುತ್ತಿದೆ. ಜೊತೆಗೆ, ಕೂಲಿಕಾರ್ಮಿಕರ ಕೊರತೆ, ಸಾಗಾಣಿಕೆ ವೆಚ್ಚ ಮತ್ತು ಹೆಚ್ಚು ಬೇಡಿಕೆಯಿರುವ ಯೂರಿಯಾ ರಸಗೊಬ್ಬರದಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ನಿವಾರಿಸಲು, ಕಡಿಮೆ ಸಮಯದಲ್ಲಿ ಹೆಚ್ಚು ಇಳುವರಿ ಪಡೆಯುವ ಉದ್ದೇಶದಿಂದ ನ್ಯಾನೋ ರಸಗೊಬ್ಬರಗಳನ್ನು ಡ್ರೋನ್ ಮೂಲಕ ಸಿಂಪಡಿಸುವ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಹಾಯಕ ಕೃಷಿ ನಿರ್ದೇಶಕ ತೇಜಸ್ವಿ, ಕಡಿಮೆ ಬೆಲೆಯ ಕಾರಣಕ್ಕೆ ರೈತರು ಯೂರಿಯಾವನ್ನು




ಅತಿಯಾಗಿ ಬಳಸುತ್ತಿದ್ದು, ಇದರಿಂದ ಭೂಮಿಗೆ ಹಾನಿಯಾಗುತ್ತಿದೆ. ನ್ಯಾನೋ ರಸಗೊಬ್ಬರಗಳು ಪರಿಣಾಮಕಾರಿಯಾಗಿದ್ದು, ಕೂಲಿಕಾರ್ಮಿಕರ ಕೊರತೆ, ಸಮಯ ಮತ್ತು ಆರೋಗ್ಯದ ದೃಷ್ಟಿಯಿಂದ ಉಪಯುಕ್ತವಾಗಿವೆ, ಎಂದರು. ಬೇಲೂರು ತಾಲ್ಲೂಕಿನ ಕೋರಟಿಕೆರೆಯ ಸತೀಶ್ ಅವರು ವಿಪ್ಲೋ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಡ್ರೋನ್ ಸಿಂಪರಣೆ ಸೇವೆಯನ್ನು ರೈತರಿಗೆ ಒದಗಿಸುತ್ತಿದ್ದಾರೆ. ರೈತರು

> ಡ್ರೋನ್ ಮೂಲಕ ನ್ಯಾನೋ ರಸಗೊಬ್ಬರವನ್ನು 10 ಲೀಟರ್ ನೀರಿನೊಂದಿಗೆ ಕೇವಲ 10 ನಿಮಿಷಗಳಲ್ಲಿ ಸಿಂಪಡಿಸಬಹುದು. ಹಸ್ತಚಾಲಿತ ಸ್ಪ್ರೇಯರ್‌ಗೆ 200 ಲೀಟರ್ ನೀರು ಮತ್ತು ಒಂದು ದಿನದ ಕಾಲಾವಕಾಶ ಬೇಕಾಗುತ್ತದೆ. ಅಡಿಕೆ, ತರಕಾರಿ ಬೆಳೆಗಳಿಗೂ ಡ್ರೋನ್ ಸಿಂಪರಣೆ ಸೂಕ್ತವಾಗಿದೆ.
>
> – ಕೋರಟಿಕೆರೆ ಸತೀಶ್, ಡ್ರೋನ್ ಪೈಲಟ್

ಕೃಷಿ ಇಲಾಖೆಯ ಮಾರ್ಗದರ್ಶನದಂತೆ ಸಿಂಪರಣೆ ನಡೆಸಬೇಕು ಎಂದು ತೇಜಸ್ವಿ ಸಲಹೆ ನೀಡಿದರು. ಮುಸುಕಿನ ಜೋಳಕ್ಕೆ ಬಿಳಿ ಸುಳಿ ರೋಗ ಮತ್ತು ಸೈನಿಕ ಹುಳು ಕಾಟದ ಬಗ್ಗೆ ಮಾಹಿತಿ ಪಡೆದು ಸೂಕ್ತ ಔಷಧ ಸಿಂಪಡಿಸುವಂತೆಯೂ ಸೂಚಿಸಿದರು.

ಕಾರ್ಯಕ್ರಮದಲ್ಲಿ ಹಳಬೀಡು ಕೃಷಿ ಇಲಾಖೆಯ ಅಧಿಕಾರಿ ಹೇಮಂತ್, ಆತ್ಮ ಯೋಜನೆಯ ಅಧಿಕಾರಿ ಲತಾ, ಡ್ರೋನ್ ಪೈಲಟ್ ಸತೀಶ್, ರೈತ ಮುಖಂಡರಾದ ಹಲಗಯ್ಯ, ಹಾಲಪ್ಪ, ರಾಜಶೇಖರ್, ಚೇತನ್, ಶಂಕರೇಗೌಡ, ರಾಕೇಶ್, ಚಿದಾನಂದ, ಶಿವಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಹಿರೀಸಾವೆ ಕಾರ್ತಿಕ್ ಪಬ್ಲಿಕ್ ಶಾಲೆಗೆ ಸಮಗ್ರ ಪ್ರಶಸ್ತಿ

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಗ್ರಾಮದ ಎನ್.ಗಂಗಾಧರ್ ಕ್ರೀಡಾಂಗಣದಲ್ಲಿ ನಡೆದ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಹಿರೀಸಾವೆಯ ಕಾರ್ತಿಕ್ ಪಬ್ಲಿಕ್ ಶಾಲೆಯು ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಬಾಲಕರ ವಿಭಾಗದಲ್ಲಿ 100 ಮೀಟರ್ ಓಟ ಪ್ರಥಮ, 200 ಮೀ. ಪ್ರಥಮ, 400 ಮೀ. ತೃತೀಯ, 4★100 ರಿಲೇ ಪ್ರಥಮ, ಉದ್ದ ಜಿಗಿತದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ, ಎತ್ತರ ಜಿಗಿತ-ಪ್ರಥಮ ಮತ್ತು ತೃತೀಯ, ಗುಂಡು ಎಸೆತ ಪ್ರಥಮ, ತಟ್ಟೆ ಎಸೆತ ದ್ವಿತೀಯ, ಕಬಡ್ಡಿ ಪ್ರಥಮ, ಥ್ರೋ ಬಾಲ್ ಪ್ರಥಮ ಹಾಗೂ ವಾಲಿಬಾಲ್ ದ್ವಿತೀಯ ಸ್ಥಾನ ಪಡೆದಿದೆ.

ಇನ್ನು ಬಾಲಕರ ವಿಭಾಗದಲ್ಲಿ 8 ನೇ ತರಗತಿಯ ಮೋಹಿತ್ ಕುಮಾರ್



ವೈಯಕ್ತಿಕ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ. ಬಾಲಕಿಯರ ವಿಭಾಗದಲ್ಲಿ 600 ಮೀ. ಓಟದಲ್ಲಿ ತೃತೀಯ, 4★100 ಪ್ರಥಮ, ಉದ್ದ ಜಿಗಿತದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ, ತಟ್ಟೆ ಎಸೆತ ದ್ವಿತೀಯ ಮತ್ತು ತೃತೀಯ, ಗುಂಡು ಎಸೆತ ತೃತೀಯ, ವಾಲಿಬಾಲ್ ಪ್ರಥಮ, ಕಬಡ್ಡಿ ಪ್ರಥಮ ಹಾಗೂ ಥ್ರೋ ಬಾಲ್ ದ್ವಿತೀಯ ಸ್ಥಾನ ಗಳಿಸಿದ್ದಾರೆ

ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ಪುಟ್ಟರಾಜು ಹಾಗೂ ವಿದ್ಯಾರ್ಥಿಗಳನ್ನು ಸಂಸ್ಥೆ ವತಿಯಿಂದ ಶುಕ್ರವಾರ ಅಭಿನಂದಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಅನಂತಕೃಷ್ಣಮೂರ್ತಿ, ಕಾರ್ಯದರ್ಶಿ ರೇಣುಕಾ ದೇವಿ, ಮುಖ್ಯಶಿಕ್ಷಕ ಚೇತನ್ ಕುಮಾರ್ ಬಿ.ಸಿ. ಹಾಗೂ ಶಿಕ್ಷಕ ವೃಂದ ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

# ಪ್ರಜ್ವಲ್ ರೇವಣ್ಣ ದೋಷಿ ಎಂದ ಕೋರ್ಟ್ : ಸಿಪಿಐಎಂ ಸ್ವಾಗತ

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಸರಣಿ ಅತ್ಯಾಚಾರ ಪ್ರಕರಣದಲ್ಲಿ ಬೆಂಗಳೂರಿನ ವಿಶೇಷ ನ್ಯಾಯಾಲಯವು ದೋಷಿ ಎಂದು ಘೋಷಿಸಿದೆ. ಸಿಪಿಐಎಂ ಹಾಸನ ಜಿಲ್ಲಾ ಸಮಿತಿ ತೀರ್ಪನ್ನು ಸ್ವಾಗತಿಸಿ, ಗರಿಷ್ಠ ಶಿಕ್ಷೆಗೆ ಒತ್ತಾಯಿಸಿದೆ. 2024ರಿಂದ ಸಿಪಿಐಎಂ ಮತ್ತು ಜನಪರ ಚಳುವಳಿಗಳು ಹೋರಾಟ ನಡೆಸಿದ್ದವು. ಸಂತ್ರಸ್ತರ ಧೈರ್ಯ ಮತ್ತು ಎಸ್‌ಐಟಿಯ ತನಿಖೆಯನ್ನು ಸಿಪಿಐಎಂ ಶ್ಲಾಘಿಸಿದೆ. ಅಶ್ಲೀಲ ವಿಡಿಯೋ ಹಂಚಿದವರಿಗೂ ಶಿಕ್ಷೆಯಾಗಬೇಕೆಂದು ಎಂದು ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಚ್.ಆರ್. ನವೀನ್ ಕುಮಾರ್ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

# ಡಿಸ್ಟಿಂಕ್ಷನ್ ಸಿನಿಮಾ ಮಹಾವತಾರನರಸಿಂಹ




– ಪ್ರಶಾಂತ್ ಭಟ್

ಪುರಾಣದ ಕತೆಗಳ ಮಕ್ಕಳಿಗೆ ದಾಟಿಸುವುದು ಹೇಗೆ?
ಹಾಲಿವುಡ್ ಸಿನಿಮಾಗಳ ನೋಡುವಾಗ ಈ ತೆರನಾಗಿ ನಮ್ಮ ಪುರಾಣಗಳ ತೆರೆಗೆ ತಂದರೆ ಎಂದು ಆಸೆ ಹುಟ್ಟುತ್ತಿತ್ತು.
ನಿಜ ಹೇಳಬೇಕೆಂದರೆ ಈ ಸಿನಿಮಾಗೆ ಹೋಗಲು ಒಂದೇ ಕಾರಣ, ಮಗಳಿಗೆ ತೋರಿಸಬೇಕು ಎಂಬುದೇ.
ಗೊತ್ತಿರುವ ಕತೆಯೇ.. ಅದಲ್ಲದೆ ಭಾರತದ ಆ?ಯನಿಮೇಷನ್ ಸಿನಿಮಾಗಳು ಎಷ್ಟು ಚೆನ್ನಾಗಿರಬಹುದು ಎಂಬ ಪೂರ್ವಗ್ರಹ.
ಆದರೆ ಸಿನಿಮಾ ನನ್ನ ನಿರೀಕ್ಷೆಗೂ ಮೀರಿ ತೃಪ್ತಿ ಕೊಟ್ಟಿತು.
ಅದರಲ್ಲೂ ಬ್ರಹ್ಮಾಂಡಗಳ ತೋರಿಸಿದ ರೀತಿ ಪುರಾಣಗಳ ಓದಿಕೊಂಡವನಿಗೆ ಮಾತ್ರ ಸಾಧ್ಯ!
ಸಂಭಾಷಣೆ, ಚಿತ್ರಕಥೆ, ಹಿನ್ನೆಲೆ ಸಂಗೀತ ,ಗ್ರಾಫಿಕ್ಸ್ ಎಲ್ಲದರಲ್ಲೂ ಡಿಸ್ಟಿಂಕ್ಷನ್..
ಬಹಳ ಬಹಳ ಇಷ್ಟವಾಯಿತು.
ಕೊನೆಗೆ ಅಪ್ರಯತ್ನಪೂರ್ವಕವಾಗಿ ಕೈ ಜೋಡಿಸಿ ಹೋಯಿತು.
ದಯವಿಟ್ಟು ಮಕ್ಕಳ ಕರೆದುಕೊಂಡು ಹೋಗಿ ನೋಡಿ ಬನ್ನಿ.

**ರೇಟಿಂಗ್ 9-10**

# ಜಿಲ್ಲಾ ಮಾಧ್ಯಮ ದಿನಾಚರಣೆ ಇಂದು

ಹಾಸನ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆ.2 ರಂದು ನಗರದ ಪವನಪುತ್ರ ರೆಸಾರ್ಟ್‌ನಲ್ಲಿ ಮಾಧ್ಯಮ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ಎಚ್ ವೇಣುಕುಮಾರ್ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಶ್ರವಣಬೆಳಗೊಳ ಜೈನ ಮಠದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಹಾಗೂ ಶ್ರೀ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರ ಆಶೀರ್ವಾದದೊಂದಿಗೆ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರೂ ಆದ ಅರಸೀಕೆರೆ ಶಾಸಕ ಕೆ.ಎಂ ಶಿವಲಿಂಗೇಗೌಡ ಉದ್ಘಾಟನೆ ನೆರವೇರಿಸಲಿದ್ದಾರೆ. ಸಂಸದ ಶ್ರೇಯಸ್ ಪಟೇಲ್ ಉಪಸ್ಥಿತಿಯಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಆಯೇಶಾ ಕಾನಂ ದಿಕ್ಸೂಚಿ ಭಾಷಣ ಮಾಡುವರು ಎಂದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ.ವಿ ಶಿವಾನಂದ ತಗಡೂರು ಆಶಯ ನುಡಿಗಳನಾಡಲಿದ್ದು, ಕನ್ನಡಪ್ರಭ ಮತ್ತು ಏಷ್ಯಾನೆಟ್ ಪ್ರಧಾನ ಸಂಪಾದಕ

ರವಿ ಹೆಗಡೆ ಪ್ರಧಾನ ಭಾಷಣ ಮಾಡುವರು ಎಂದರು.

ಜಿಲ್ಲಾ ಸಂಘದ ಅಧ್ಯಕ್ಷ ವೇಣುಕುಮಾರ್ ಅಧ್ಯಕ್ಷತೆ ವಹಿಸಲಿದ್ದು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಬಿ ಮದನಗೌಡ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ ಎಂದರು. ಸ್ಥಳೀಯ ಶಾಸಕ ಎಚ್.ಪಿ.ಸ್ವರೂಪ್ ಪ್ರಕಾಶ್, ಮಹಾನಗರ ಪಾಲಿಕೆ ಮಹಾಪೌರ ಎಂ.ಚಂದ್ರೇಗೌಡ, ಐಎಫ್ ಡಬ್ಲ್ಯೂಜೆ ಅಧ್ಯಕ್ಷ ಬಿ.ವಿ ಮಲ್ಲಿಕಾರ್ಜುನಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ , ಎಸ್ಪಿ ಮೊಹಮದ್ ಸುಜಿತಾ, ಜಿಪಂ ಸಿಇಒ ಬಿ.ಆರ್ ಪೂರ್ಣಿಮಾ, ಹಿರಿಯ ವಾರ್ತಾಧಿಕಾರಿ ಮೀನಾಕ್ಷಮ್ಮ ಮೊದಲಾದವರು ಭಾಗಿಯಾಗುವರು ಎಂದು ವಿವರಿಸಿದರು.

ಸಂಘದ ಮಾಜಿ ಅಧ್ಯಕ್ಷರಾದ ಕೆ.ಆರ್ ಮಂಜುನಾಥ್, ಎಸ್.ಆರ್ ಪ್ರಸನ್ನ ಕುಮಾರ್ ಹಾಗೂ ಕೆಯುಡಬ್ಲ್ಯೂಜೆ ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗೂ ಜ್ಞಾನದೀಪ ಪತ್ರಿಕೆ ಸಂಪಾದಕ ಡಿ.ಜೆ ರಾಜಗೋಪಾಲ್ ಅವರಿಗೆ ವಿಶೇಷ ಸನ್ಮಾನ ಇದೆ ಎಂದರು.

ಮಾಧ್ಯಮ ದಿನಾಚರಣೆ ಹಿನ್ನೆಲೆ ಪತ್ರಕರ್ತರ ಕುಟುಂಬಕ್ಕೆ ವಿವಿಧ ಕ್ರೀಡೆ ಆಯೋಜಿಸಲಾಗಿದೆ. ಪತ್ರಿಕಾ ರಂಗದಲ್ಲಿ ವಿಶೇಷ ಸೇವೆ ಸಲ್ಲಿಸಿದ ಜಿಲ್ಲೆಯ ಪತ್ರಕರ್ತರಿಗೆ ಸನ್ಮಾನ ಮತ್ತು ಪತ್ರಕರ್ತರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಜಿಲ್ಲೆಯ ಎಲ್ಲ ಪತ್ರಕರ್ತರು ಕುಟುಂಬ ಸಮೇತರಾಗಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಸಮಾರೋಪ ಸಮಾರಂಭ: ಸಂಜೆ 3 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದ್ದು ಅರಕಲಗೂಡು ಶಾಸಕ ಎ ಮಂಜು ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಿವಾನಂದ ತಗಡೂರು ಸಮಾರೋಪ ಭಾಷಣ ಮಾಡಲಿದ್ದು, ಶ್ರವಣಬೆಳಗೊಳ ಶಾಸಕ ಸಿ.ಎನ್.ಬಾಲಕೃಷ್ಣ ಬಹುಮಾನ ವಿತರಿಸುವರು. ಜಿಲ್ಲೆಯ ಎಲ್ಲ ಶಾಸಕರು ಹಾಜರಿರುವರು ಎಂದರು.

ಉದ್ಯಮಿಗಳಾದ ದಿವಾಕರ್, ಶರತ್, ಕಂಚಮಾರನಹಳ್ಳಿ ಕಾಂತರಾಜು, ಹುಡಾ ಆಯುಕ್ತ ರಮೇಶ್, ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಿ.ಪಿ ಕೃಷ್ಣೇಗೌಡ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಕೆ.ಆರ್ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಬಿ.ಸಿ ಶಶಿಧರ್, ಉಪಾಧ್ಯಕ್ಷರಾದ ಕೆ.ಎಂ. ಹರೀಶ್, ಎಚ್.ಟಿ.ಮೋಹನ್ ಕುಮಾರ್ ಕಾರ್ಯದರ್ಶಿಗಳಾದ ಪಿ.ಎ.ಶ್ರೀನಿವಾಸ್, ಸಿ.ಬಿ.ಸಂತೋಷ್ ಹಾಜರಿದ್ದರು.

## ಮಾಧ್ಯಮ ದಿನಾಚರಣೆ ಹಲವು ಪತ್ರಕರ್ತರಿಗೆ ಸನ್ಮಾನ

ಹಾಸನ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಭಾನುವಾರ ಪವನಪುತ್ರ ರೆಸಾರ್ಟ್‌ನಲ್ಲಿ ಆಯೋಜಿಸಿರುವ ಮಾಧ್ಯಮ ದಿನಾಚರಣೆಯಲ್ಲಿ ಜಿಲ್ಲೆಯ ಮಾಧ್ಯಮ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿರುವ, ಪತ್ರಕರ್ತರು ಮತ್ತು ಪತ್ರಿಕಾ ವಿತರಕರನ್ನು ಸನ್ಮಾನಿಸಲಾಗುವುದು.


ಸನ್ಮಾನಿತರ ವಿವರ:
ಎಸ್ .ವಿನಯ್, ಜನತಾ ಮಾಧ್ಯಮ,
ಪಿ.ಎ. ರಾಜಶೇಖರ್, ಜನಮಿತ್ರ,
ದೇವರಾಜೇಗೌಡ, ದಿಟ್ಟ ಧ್ವನಿ,
ಗೋಪಾಲ್, ದರ್ಪಣ,
ಕೆ.ಪಿ.ಸಾಗರ್ ರಾಜು, ಪ್ರಜೋದಯ,
ಮಹೇಶ್, ಟಿವಿ 9 ಕ್ಯಾಮರಾಮ್ಯಾನ್,
ಸಚಿನ್ ಶೆಟ್ಟಿ, ವರದಿಗಾರ, ಪವರ್ ಟಿವಿ,
ಹೆಚ್. ಡಿ. ಜಯಕುಮಾರ್, ಜನತಾ ಮಾಧ್ಯಮ,
ಹರ್ಷಿತ್, ವರದಿಗಾರ, ನಾಡಸಹ್ಯಾದ್ರಿ
ಶ್ರೀಕಾಂತ್, ಸತ್ಯದ ಹೊನಲು ಸಂಜೆ ದಿನಪತ್ರಿಕೆ.

ತಾಲ್ಲೂಕು ವಿಭಾಗ:
ಚೇತನ್ ಹೆಚ್. ವಿ, ಆಲೂರು
ಲೋಹಿತ್ ಬಿ.ಆರ್, ಬೇಲೂರು
ಅರುಣ್ ಕುಮಾರ್, ಬೇಲೂರು
ಜಗದೀಶ್ ಟಿ.ಎಂ, ಅರಸೀಕೆರೆ
ರಾಮಕೃಷ್ಣ, ಹೊಳೆನರಸೀಪುರ
ನಂದನ್ ಪುಟ್ಟಣ್ಣ, ಚನ್ನರಾಯಪಟ್ಟಣ
ಜಿ.ಚಂದ್ರಶೇಖರ್, ಅರಕಲಗೂಡು
ಹೆಚ್.ಆರ್. ಜಗದೀಶ್, ಸಕಲೇಶಪುರ

ಪತ್ರಿಕಾ ವಿತರಕರ ವಿಭಾಗ
ಪ್ರೇಮ್ ಕುಮಾರ್, ಬೇಲೂರು
ಅಕ್ಷಯ್, ಹಾಸನ

ಇವರನ್ನು ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಮಾಧ್ಯಮ ದಿನಾಚರಣೆಯಲ್ಲಿ ಸನ್ಮಾನಿಸಿ ಗೌರವಿಸಲಾಗುತ್ತಿದೆ. ಇದೇ ವೇಳೆ ಪತ್ರಕರ್ತರ ಮಕ್ಕಳಿಗೂ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಸನ್ಮಾನಕ್ಕೆ ಭಾಜನರಾದ ಎಲ್ಲರಿಗೂ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಹೆಚ್.ವೇಣುಕುಮಾರ್, ಪ್ರಧಾನ ಕಾರ್ಯದರ್ಶಿ ಬಿ.ಸಿ. ಶಶಿಧರ್ ಹಾಗೂ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಬೆಂಗಳೂರಿಗೆ ತಂತ್ರಜ್ಞಾನದ ಸೇತು




ನವದೆಹಲಿ, ಆಗಸ್ಟ್ 1, 2025: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ನವದೆಹಲಿಯ ಹೋಟೇಲ್ ಐಟಿಸಿ ಮೌರ್ಯದ ಕಮಲ್ ಮಹಲ್‌ನಲ್ಲಿ ಆಯೋಜಿತವಾದ ಔಬ್ರಿಡ್ಜ್ ಟು ಬೆಂಗಳೂರುಟ ಕಾರ್ಯಕ್ರಮದಲ್ಲಿ ರಾಜತಾಂತ್ರಿಕರೊಂದಿಗೆ ಮಾತುಕತೆ ನಡೆಸಿದರು. ಈ ಕಾರ್ಯಕ್ರಮವು ಬೆಂಗಳೂರು ಟೆಕ್ ಸಮಿಟ್ 2025ಗೆ ಮುನ್ನುಡಿಯಾಗಿದ್ದು, ಕರ್ನಾಟಕವನ್ನು ಜಾಗತಿಕ ತಂತ್ರಜ್ಞಾನ ಮತ್ತು ನಾವೀನ್ಯತೆಯ ಕೇಂದ್ರವಾಗಿ ಉತ್ತೇಜಿಸುವ ಗುರಿಯನ್ನು ಹೊಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಭಾಷಣದಲ್ಲಿ ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಆರ್ಥಿಕ ಸಾಮರ್ಥ್ಯವನ್ನು ಎತ್ತಿ ಹಿಡಿದರು. ಔಔಕರ್ನಾಟಕವು ಹಂಪಿ, ಪಟ್ಟದಕಲ್ಲಿನ ಯ ಜಠಿಚಿಡಿಣಥಿ: 4. ಕರ್ನಾಟಕವು ಸಂಪ್ರದಾಯ ಮತ್ತು ಪ್ರಗತಿಯ ಸಂಗಮ ಸ್ಥಳವಾಗಿದೆ. ನಮ್ಮ ಕನ್ನಡ ಭಾಷೆಯ ಜಾಣ್ಮೆ, ಕರ್ನಾಟಕ ಸಂಗೀತ, ಯಕ್ಷಗಾನದಂತಹ ಸಾಂಸ್ಕೃತಿಕ ಸಂಪತ್ತು, ಹಾಗೂ ಪಶ್ಚಿಮ ಘಟ್ಟಗಳು, ಕೊಡಗಿನ ಕಾಫೀ ತೋಟಗಳು ಮತ್ತು ಪ್ರಶಾಂತ ಸಮುದ್ರತೀರಗಳಂತಹ ಪ್ರವಾಸೋದ್ಯಮ ಆಕರ್ಷಣೆಗಳು ರಾಜ್ಯದ ವೈವಿಧ್ಯತೆಯನ್ನು ಒತ್ತಿಹೇಳುತ್ತವೆ,ಟಟ ಎಂದು ಅವರು ಹೇಳಿದರು.

ಬೆಂಗಳೂರು ಜಾಗತಿಕ ಟೆಕ್ ನಾಯಕನಾಗಿದ್ದು, 18,000ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು, 50+ ಯೂನಿಕಾರ್ನ್‌ಗಳು ಮತ್ತು ಬಾಷ್, ಇಂಟೆಲ್, ಎಸ್‌ಎಪಿ ಕಂಪನಿಗಳ ಆರ್‌ಅಂಡ್‌ಡಿ ಕೇಂದ್ರಗಳಿಗೆ ನೆಲೆಯಾಗಿದೆ. ಔಔಕರ್ನಾಟಕವು ಭಾರತದ ನಾಲ್ಕನೇ ದೊಡ್ಡ ಆರ್ಥಿಕತೆಯಾಗಿದ್ದು, 337 ಬಿಲಿಯನ್ ಡಾಲರ್‌ನ ಜಿಎಸ್‌ಡಿಪಿಯೊಂದಿಗೆ ರಾಷ್ಟ್ರದ ಜಿಡಿಪಿಗೆ 9% ಕೊಡುಗೆ ನೀಡುತ್ತಿದೆ,ಟಟ ಎಂದು ಸಿಎಂ ತಿಳಿಸಿದರು. ಔಬಿಯಾಂಡ್ ಬೆಂಗಳೂರುಟ ಯೋಜನೆಯ ಮೂಲಕ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿಯಲ್ಲಿ ಸಮತೋಲಿತ ಬೆಳವಣಿಗೆಯನ್ನು ಖಾತರಿಪಡಿಸಲಾಗುತ್ತಿದೆ.

2017ರಲ್ಲಿ ಆರಂಭವಾದ ಜಾಗತಿಕ ನಾವೀನ್ಯತಾ ಮೈತ್ರಿಯು ಈಗ 35 ದೇಶಗಳೊಂದಿಗೆ ವಿಸ್ತರಿಸಿದೆ. ಜರ್ಮನಿ, ಆಸ್ಟ್ರೇಲಿಯಾ, ಯುಕೆ, ಯುಎಸ್, ಜಪಾನ್ ಸೇರಿದಂತೆ ಹಲವು ರಾಷ್ಟ್ರಗಳೊಂದಿಗೆ ಶಿಕ್ಷಣ, ಸಂಶೋಧನೆ, ಸ್ಮಾರ್ಟ್ ಸಿಟಿ, ಶುದ್ಧ ಇಂಧನ ಮತ್ತು ಪ್ರವಾಸೋದ್ಯಮದಲ್ಲಿ ಸಹಯೋಗ ಬೆಳೆಸಲಾಗುತ್ತಿದೆ.

ನಿಪುಣ ಕರ್ನಾಟಕ ಕಾರ್ಯಕ್ರಮದ ಮೂಲಕ 1 ಲಕ್ಷಕ್ಕೂ ಹೆಚ್ಚು ಯುವಕರಿಗೆ ಎಐ, ಸೈಬರ್ ಸೆಕ್ಯುರಿಟಿ, ಮತ್ತು ಜೈವಿಕ ತಂತ್ರಜ್ಞಾನ ಕೌಶಲ್ಯಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಭಾರತೀಯ ವಿಜ್ಞಾನ ಸಂಸ್ಥೆ, ಐಐಎಂ ಬೆಂಗಳೂರು, ಮತ್ತು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯಂತಹ ಸಂಸ್ಥೆಗಳು ಜಾಗತಿಕವಾಗಿ ಗುರುತಿಸಲ್ಪಟ್ಟಿವೆ.

ನವೆಂಬರ್ 18-20, 2025ರಂದು ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ನಡೆಯಲಿರುವ ಬೆಂಗಳೂರು ಟೆಕ್ ಸಮಿಟ್‌ನಲ್ಲಿ 60 ದೇಶಗಳ 1200 ಪ್ರದರ್ಶಕರು, 600 ಭಾಷಣಕಾರರು ಮತ್ತು 1 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ. ಔಫ್ಯೂಚರೈಸ್‌ಟ ವಿಷಯದೊಂದಿಗೆ, ಕೃತಕ ವಿಜ್ಞಾನ, ಸೆಮಿಕಂಡಕ್ಟರ್ಸ್, ಆರೋಗ್ಯ ಮತ್ತು ಹವಾಮಾನ ತಂತ್ರಜ್ಞಾನಗಳಲ್ಲಿ ನಾವೀನ್ಯತೆಯನ್ನು ಚರ್ಚಿಸಲಾಗುವುದು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್ -2

1934: ಅಡಾಲ್ಫ್ ಹಿಟ್ಲರ್ ಜರ್ಮನಿಯ ಚಾನ್ಸೆಲರ್ ಮತ್ತು ಪ್ರೆಸಿಡೆಂಟ್ ಆಗಿ ಅಧಿಕಾರ ಸ್ವೀಕರಿಸಿದರು. ಈ ಮೂಲಕ ಅವರು ಔಔಫ್ಯೂರರ್‌ಟಟ (ಈಡಿಡಿ) ಎಂಬ ಹುದ್ದೆ ವಹಿಸಿಕೊಂಡರು.

1945: ಎರಡನೇ ಮಹಾಯುದ್ಧದ ನಂತರ ಪಾಟ್ಸ್‌ಡ್ಯಾಮ್ ಗೋಷ್ಠಿಯಲ್ಲಿ ಅಂಕಪಾಲರಾಗಿ ಚರ್ಚಿಲ್ ಸ್ಥಾನಕ್ಕೆ ಕ್ಲೆಮೆಂಟ್ ಅಟ್ಲಿ ನೇಮಕವಾದರು.

1990: ಇರಾಕ್ ಸದ್ದಾಂ ಹುಸೇನ್ ನೇತೃತ್ವದಲ್ಲಿ ಕುವೈತ್ ಮೇಲೆ ಆಕ್ರಮಣ ನಡೆಸಿತು. ಈ ಘಟನೆ ನಂತರದ ಖಡ್ಗಾಕಾರದ ಗಲಭೆಗಳಿಗೆ ಕಾರಣವಾಯಿತು.

1870: ಫ್ರಾನ್ಸ್ -ಪ್ರಷಿಯನ್ ಯುದ್ಧದ ಕಾಲದಲ್ಲಿ ಸೆಡಾನ್ ಯುದ್ಧ ನಡೆಯಿತು.

ಜನನ

1924: ಜೆಮ್ಸ್ ಬುಷ್ (James Baldwin), ಖ್ಯಾತ ಅಮೆರಿಕನ್ ಕತೆಗಾರ ಮತ್ತು ಸಾಮಾಜಿಕ ಚಿಂತಕ.

1942: ಇಸಾಬೆಲ್ ಅಲೆಂಡೆ, ಚಿಲಿಯ ಸಾಹಿತಿಯಾಗಿ ಪ್ರಖ್ಯಾತ.

ಮರಣ

1922: ಅಲೆಕ್ಸಾಂಡರ್ ಗ್ರಾಹಂ ಬೆಲ್, ಟೆಲಿಫೋನ್ ಆವಿಷ್ಕಾರಕ.

1997: ಫಿಮೊ ಮಾರ್ನಾ, ಉಕ್ರೇನಿಯನ್ ವಿಜ್ಞಾನಿ.

2016: ಅಹ್ಮದ್ ಜಿಯಾ ಮಸೂದ್, ಅಫ್ಘಾನಿಸ್ತಾನದ ರಾಜಕಾರಣಿ.

# ಕೆರೆ ಒತ್ತುವರಿ ತೆರವುಗೊಳಿಸಿ ಡಿಸಿ ಲತಾ ಕುಮಾರಿ ಸೂಚನೆ

ಹಾಸನ: ಜಿಲ್ಲೆಯಲ್ಲಿ ಕೆರೆಗಳ ಒತ್ತುವರಿ ಪತ್ತೆ ಹಚ್ಚುವುದು, ತೆರವುಗೊಳಿಸುವುದು, ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ಕೆರೆ ಒತ್ತುವರಿ ತೆರವು ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಟನಗರದ ಹುಣಸಿನಕೆರೆ ದಡದಲ್ಲಿ ಸಾರ್ವಜನಿಕರು ಕಸ ವಿಲೇವಾರಿ ಮಾಡುತ್ತಿದ್ದಾರೆ. ಈ ಕೆರೆ ಸುತ್ತ ಬೇಲಿ ನಿರ್ಮಾಣ ಮಾಡಿ, ಸಂರಕ್ಷಣೆ ಮಾಡಬೇಕು. ಜೊತೆಗೆ ಕೆರೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕುಟ ಎಂದು ಬೃಹತ್ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಕೆರೆಯ ಬಳಿಯಿರುವ ಮನೆಗಳ ಒಳಚರಂಡಿ ನೀರು ಕೆರೆಗೆ ಹರಿಯುವಂತೆ ಸಂಪರ್ಕ ನೀಡಿದ್ದಾರೆ ಇದನ್ನು ಮೊದಲು ತಪ್ಪಿಸಬೇಕು. ಉಪ ಲೋಕಾಯುಕ್ತರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನೀಡಿರುವ ನಿರ್ದೇಶನದಂತೆ ಅಧಿಕಾರಿಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಕೂಡಲೇ ಲೋಕಾಯುಕ್ತ ಕಚೇರಿಗೆ ವರದಿ ಕಳುಹಿಸುವಂತೆಟ ಸೂಚಿಸಿದರು.

ಪ್ರತಿ ತಾಲ್ಲೂಕಿನಲ್ಲಿ ಕೆರೆ ಒತ್ತುವರಿ ಬಗ್ಗೆ ಸಭೆ ನಡೆಸಿ, ಒತ್ತುವರಿ ಗುರುತಿಸಿ ತೆರವುಗೊಳಿಸಿರುವ ಸಂಖ್ಯೆ, ತೆರವಿಗೆ ಬಾಕಿಯಿರುವ ಸಂಖ್ಯೆ ಮತ್ತು ತೆರವಿಗೆ ಏನು ಸಮಸ್ಯೆ ಇದೆ ಎಂಬುದರ ಬಗ್ಗೆ ವರದಿ ನೀಡಬೇಕುಟ ಎಂದು ಸೂಚಿಸಿದರು.

ಜಿಲ್ಲೆಯಲ್ಲಿರುವ ಕೆರೆಗಳು ಪೂರ್ಣ ಪ್ರಮಾಣದಲ್ಲಿ, ಶೇ 50 ರಷ್ಟು, ಶೇ 50 ಕ್ಕಿಂತ ಕಡಿಮೆ ನೀರು ತುಂಬಿರುವ ಹಾಗೂ ನೀರೇ ಇಲ್ಲದಿರುವ ಕೆರೆಗಳ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು.

ಕೆರೆಗಳ ನೀರಿನ ಮಾದರಿಗಳನ್ನು ಪರೀಕ್ಷೆ ನಡೆಸಬೇಕು. ಬಳಕೆಗೆ ಯೋಗ್ಯವಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಬೇಕು. ಕಲುಷಿತಗೊಂಡಿರುವ ಬಗ್ಗೆ ಅನುಮಾನಗಳು ಬಂದರೆ ಪರಿಸರ ಇಲಾಖೆ ಗಮನಕ್ಕೆ ತಂದು ನೀರಿನ ಮಾದರಿಗಳನ್ನು ಪರೀಕ್ಷೆ ನಡೆಸುವಂತೆಟ ನಿರ್ದೇಶನ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶೆ ಜಿ.ಕೆ.ದಾಕ್ಷಾಯಿಣಿ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಸಣ್ಣ ನೀರಾವರಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ರಾಮಚಂದ್ರ, ಯೋಜನಾ ನಿರ್ದೇಶಕ ನಾಗರಾಜ್, ಅಧಿಕಾರಿಗಳು ಭಾಗವಹಿಸಿದ್ದರು.

ಕೆರೆಗಳ ಹೂಳು ತೆಗೆಯಬೇಕು. ಕೆರೆಗೆ ನೀರು ಸರಾಗವಾಗಿ ಹರಿಯಲು ಕಾಲುವೆಗಳನ್ನು ಸ್ವಚ್ಛಗೊಳಿಸಬೇಕು. ಕೆರೆಗಳ ಮೇಲ್ವಿಚಾರಣೆ ಮಾಡಬೇಕು

# ಸರ್ಕಾರದ ನಡೆ ಎಐಡಿಎಸ್‌ಓ ವಿರೋಧ

ಹಾಸನ: ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ತೇರ್ಗಡೆ ಅಂಕವನ್ನು ಶೇ.33ಕ್ಕೆ ಇಳಿಸುವ ರಾಜ್ಯ ಸರ್ಕಾರದ ನಡೆಯನ್ನು ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ಬಲವಾಗಿ ವಿರೋಧಿಸಿದೆ. ಈ ನಿರ್ಧಾರ ಜಾರಿಗೊಳಿಸಿದರೆ, ಅದು ಶಿಕ್ಷಣದ ಗುಣಮಟ್ಟವನ್ನು ಗಣನೀಯವಾಗಿ ಕುಗ್ಗಿಸುತ್ತದೆ ಮತ್ತು ವಿಶೇಷವಾಗಿ ಸರ್ಕಾರಿ ಮತ್ತು ಗ್ರಾಮೀಣ ಶಾಲಾ ವಿದ್ಯಾರ್ಥಿಗಳ ಮೇಲೆ ಭವಿಷ್ಯದ ದಿನಗಳಲ್ಲಿ ತೀವ್ರ ನಕಾರಾತ್ಮಕ ಪರಿಣಾಮ ಸೃಷ್ಟಿಸುತ್ತದೆ.

ಕಳೆದ ವರ್ಷಗಳಲ್ಲಿ ಹೆಚ್ಚಿದ ತೇರ್ಗಡೆ ಅಂಕಗಳು ನಿಜವಾದ ಶೈಕ್ಷಣಿಕ ಸುಧಾರಣೆ ಸೂಚಿಸುವುದಿಲ್ಲ, ಬದಲಿಗೆ ಅವು ಮಾನದಂಡಗಳ ವ್ಯವಸ್ಥಿತ ದುರ್ಬಲಗೊಳಿಸುವಿಕೆಯ ಪರಿಣಾಮವಾಗಿದೆ. 9ನೇ ತರಗತಿವರೆಗೆ ಕಡ್ಡಾಯ ತೇರ್ಗಡೆ ನೀತಿ ಜಾರಿಗೆ ತಂದಿರುವುದರಿಂದ, ವಿದ್ಯಾರ್ಥಿಗಳು ಅಗತ್ಯ ಮೂಲಭೂತ ಜ್ಞಾನ ಹೊಂದದೇ ಉತ್ತೀರ್ಣರಾಗುತ್ತಿದ್ದಾರೆ. 10ನೇ ತರಗತಿಗೆ ತಲುಪು ವಷ್ಟರಲ್ಲಿ, ಅನೇಕರು ವಿಜ್ಞಾನ ಮತ್ತು ಗಣಿತದಂತಹ ಸವಾಲಿನ ವಿಷಯ ಎದುರಿಸಲು ಸಿದ್ಧರಿಲ್ಲ. ಈ ಕಲಿಕೆಯ ಅಂತರವನ್ನು ನಿವಾರಿಸುವ ಬದಲು, ಸರ್ಕಾರವು ಈಗ ಶೈಕ್ಷಣಿಕ ಶಿಸ್ತನ್ನು ಇನ್ನಷ್ಟು ಹದಗೆಡಿಸುವ ಅಡ್ಡದಾರಿ ಪ್ರಸ್ತಾಪಿಸುತ್ತಿದೆ ಎಂದು ದೂರಿದೆ.

ಶಿಕ್ಷಣ ವ್ಯವಸ್ಥೆಯನ್ನು ಕಾಡುತ್ತಿರುವ ನಿಜವಾದ ಸಮಸ್ಯೆಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಬೋಧಕ ಮತ್ತು ಬೋಧಕೇತರ ಹುದ್ದೆಗಳು ಖಾಲಿ ಇವೆ. ಮೂಲಸೌಕರ್ಯಗಳಲ್ಲಿ ತೀವ್ರ ಅಸಮರ್ಪಕತೆಯಿದೆ. ಶಿಕ್ಷಕರು ಬೋಧಕೇತರ ಕರ್ತವ್ಯಗಳ ಅತಿಯಾದ ಹೊರೆಗೆ ಒಳಗಾಗಿದ್ದಾರೆ. ಸರ್ಕಾರವು ತರಬೇತಿ, ಸಂಪನ್ಮೂಲಗಳು ಅಥವಾ ಅರ್ಥಪೂರ್ಣ ಕಲಿಕೆಗೆ ಅನುಕೂಲಕರ ವಾತಾವರಣ ಒದಗಿಸುವಲ್ಲಿ ವಿಫಲವಾಗಿದೆ. ಇವುಗಳು ಈ ಹೊತ್ತಿನ ಅವಶ್ಯಕತೆಗಳೇ ಹೊರತು, ಶೈಕ್ಷಣಿಕ ಮಾನದಂಡ ಕಡಿತಗೊಳಿಸುವುದಲ್ಲ ಎಂದಿದೆ. ತೇರ್ಗಡೆ ಅಂಕವನ್ನು ಕಡಿಮೆ ಮಾಡುವುದರಿಂದ ಈಗಾಗಲೇ ಹದಗೆಡುತ್ತಿರುವ ಉನ್ನತ ಶಿಕ್ಷಣದ ಗುಣಮಟ್ಟ ಇನ್ನಷ್ಟು ಹದಗೆಡುತ್ತದೆ. ಸರ್ಕಾರಿ ಶಾಲೆಗಳ ಮೇಲೆ ಅವಲಂಬಿತವಾಗಿರುವ ಬಡ ಮತ್ತು ಅಂಚಿನಲ್ಲಿರುವ ವಿದ್ಯಾರ್ಥಿಗಳು ಹೆಚ್ಚು ಬಾಧಿತರಾಗುತ್ತಾರೆ. ಸಾಕಷ್ಟು ಸಿದ್ಧತೆಯಿಲ್ಲದೆ, ಅವರು ಪ್ರವೇಶ ಪರೀಕ್ಷೆಗಳಲ್ಲಿ ಮತ್ತು ಉದ್ಯೋಗ ಮಾರುಕಟ್ಟೆಯಲ್ಲಿ ಖಾಸಗಿ ಸಂಸ್ಥೆಗಳ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಲು ಹೆಣಗಾಡುತ್ತಾರೆ, ಇದು ಅಸಮಾನತೆ ಇನ್ನಷ್ಟು ಹೆಚ್ಚಿಸುತ್ತದೆ.

ಹಾಗಾಗಿ ತೇರ್ಗಡೆ ಅಂಕ ಕಡಿಮೆ ಮಾಡುವ ಪ್ರಸ್ತಾವನೆ ಹಿಂಪಡೆಯಬೇಕು, ಎಲ್ಲಾ ಖಾಲಿ ಬೋಧಕ ಮತ್ತು ಬೋಧಕೇತರ ಹುದ್ದೆ ತಕ್ಷಣ ಭರ್ತಿ ಮಾಡಬೇಕು, ಸಮರ್ಪಕ ಮೂಲಸೌಕರ್ಯ, ತರಬೇತಿ ಮತ್ತು ಕಲಿಕಾ ಸಾಮಗ್ರಿ ಒದಗಿಸಬೇಕು, ಶಿಕ್ಷಕರ, ಬೊಧಕೇತರ ಕೆಲಸದ ಹೊರೆ ಕಡಿಮೆ ಮಾಡಬೇಕು, ಆರಂಭಿಕ ತರಗತಿಗಳಿಂದಲೇ ಮೂಲಭೂತ ಕಲಿಕೆ ಬಲಪಡಿಸಬೇಕು ಹಾಗೂ ಮೊದಲನೇ ತರಗತಿಯಿಂದಲೇ ಪಾಸು-ಫೇಲ್ ಪದ್ಧತಿ ಜಾರಿಗೊಳಿಸಿ. ಈ ಕ್ರಮವನ್ನು ವಿರೋಧಿಸುವಂತೆ ಮತ್ತು ಬಲವಾದ, ವೈಜ್ಞಾನಿಕ ಮತ್ತು ಸಮಾನ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ನಿರ್ಮಿಸಲು ಕೈಜೋಡಿಸುವಂತೆ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಮತ್ತು ಸಾರ್ವಜನಿಕರಿಗೆ ಎಐಡಿಎಸ್‌ಓ ಕರೆ ನೀಡಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248